# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕೇಂದ್ರ ಕಛೇರಿ, ವೃತ್ತ ಕಛೇರಿ, ವಿಭಾಗ ಮತ್ತು ಉಪ ವಿಭಾಗಗಳಿಗೆ ವೇತನೇತರ ವೆಚ್ಚಕ್ಕಾಗಿ ಅನುದಾನ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
1. 2016-17ನೇ ಸಾಲಿನ ರಾಜ್ಯದ ಆಯವ್ಯಯ 2215-01-001-1-03 (ಯೋಜನೇತರ)
2. ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂ.ಆಇ/3/ಟಿಎಫ್‌ಪಿ/2016, ಬೆಂಗಳೂರು, ದಿ: 02-04-2016

**ಪೀಠಿಕೆ:**

ಮೇಲೆ ಓದಲಾದ ಉಲ್ಲೇಖ (1) ರ 2016-17ನೇ ಸಾಲಿನ ರಾಜ್ಯದ ಆಯವ್ಯಯ 2215-01-001-1-03 (ಯೋಜನೇತರ) ಅಡಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕೇಂದ್ರ ಕಛೇರಿ ಹಾಗೂ ವ್ಯಾಪ್ತಿಯಡಿಯಲ್ಲಿನ ಅಧೀನ ಕಛೇರಿಗಳ ವೇತನೇತರ ವೆಚ್ಚಕ್ಕಾಗಿ ಒಟ್ಟು ರೂ.1,353.00 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ. ಉಲ್ಲೇಖ (2) ರ ಆದೇಶದಲ್ಲಿ ಹಣಕಾಸು ಪ್ರತ್ಯಾಯೋಜನೆಯಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ವ್ಯಾಪ್ತಿಯಡಿಯಲ್ಲಿನ ಅಧೀನ ಕಛೇರಿಗಳ ವೇತನೇತರ ವೆಚ್ಚಕ್ಕಾಗಿ 2016-17ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ನಿಗಧಿಯಾದ ರೂ.1,353.00 ಲಕ್ಷಗಳಲ್ಲಿ ಮೂರನೇ ಒಂದು ಭಾಗದ ಅನುದಾನ ರೂ.451.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕೇಂದ್ರ ಕಛೇರಿ, ವೃತ್ತ ಕಛೇರಿ, ವಿಭಾಗ ಹಾಗೂ ಉಪ ವಿಭಾಗಗಳಿಗೆ ವೇತನೇತರ ವೆಚ್ಚಕ್ಕಾಗಿ ರೂ.451.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ನಿರ್ಣಯಿಸಲಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/239/ಗ್ರಾಕುನೀ&ನೈಇ/2016, ಬೆಂಗಳೂರು, ದಿನಾಂಕ 14-06-2016

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕೇಂದ್ರ ಕಛೇರಿ, 4 ವೃತ್ತಗಳು, 31 ವಿಭಾಗಗಳು ಹಾಗೂ 176 ಉಪ ವಿಭಾಗ ಕಛೇರಿಗಳಿಗೆ ವೇತನೇತರ ವೆಚ್ಚಕ್ಕಾಗಿ ಈ ಕೆಳಕಂಡಂತೆ ತೋರಿಸಿರುವ ಲೆಕ್ಕಶೀರ್ಷಿಕೆಗಳಡಿ ಪ್ರಥಮ ಕಂತಿನ ಬಿಡುಗಡೆಯಾಗಿ ಒಟ್ಟು ರೂ.**451.00** ಲಕ್ಷಗಳ (ರೂಪಾಯಿ ನಾಲ್ಕು ನೂರ ಐವತ್ತೊಂದು ಲಕ್ಷ ಮಾತ್ರ) ಅನುದಾನವನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕೇಂದ್ರ ಕಛೇರಿ, 4 ವೃತ್ತ ಕಛೇರಿ ಹಾಗೂ ರಾಜ್ಯದ 30 ಜಿಲ್ಲಾ ಪಂಚಾಯತ್‌ಗಳಿಗೆ ಅನುಬಂಧದಲ್ಲಿ ತೋರಿಸಿರುವಂತೆ ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ವೆಚ್ಚದ ವಿವರ | ಅನುದಾನ |
|---|---|---|---|
| 1 | 2215-01-001-1-03-021 (ಯೋಜನೇತರ) | ವೈದ್ಯಕೀಯ ವೆಚ್ಚದ ಮರುಪಾವತಿ | 20.00 |
| 2 | 2215-01-001-1-03-041 (ಯೋಜನೇತರ) | ಪ್ರಯಾಣ ವೆಚ್ಚಗಳು | 34.00 |
| 3 | 2215-01-001-1-03-051 (ಯೋಜನೇತರ) | ಸಾಮಾನ್ಯ ವೆಚ್ಚ | 100.00 |
| 4 | 2215-01-001-1-03-052 (ಯೋಜನೇತರ) | ದೂರವಾಣಿ ವೆಚ್ಚಗಳು | 31.00 |
| 5 | 2215-01-001-1-03-053 (ಯೋಜನೇತರ) | ಕಛೇರಿಯ ಪೀಠೋಪಕರಣಗಳು ಮತ್ತು ಜೋಡಣೆಗಳ ಖರೀದಿ | 50.00 |
| 6 | 2215-01-001-1-03-059 (ಯೋಜನೇತರ) | ಇತರೆ ವೆಚ್ಚಗಳು | 84.00 |
| 7 | 2215-01-001-1-03-071 (ಯೋಜನೇತರ) | ಕಟ್ಟಡ ವೆಚ್ಚಗಳು | 52.00 |
| 8 | 2215-01-001-1-03-195 (ಯೋಜನೇತರ) | ಸಾರಿಗೆ ವೆಚ್ಚಗಳು | 80.00 |
| | ಒಟ್ಟು | | **451.00** |

2. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ವಿನಿಯೋಗಿಸಲು ಆದೇಶಿಸಿದೆ.

ಷರತ್ತುಗಳು:

i) ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ-1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು-2000, ಕರ್ನಾಟಕ ಆರ್ಥಿಕ ಸಂಹಿತೆ-1958 ಹಾಗೂ ಜಾರಿ ಇರುವ ಇಲಾಖಾ ಇತರೆ ನಿಯಮಗಳು / ಕಾಯ್ದೆಗಳನ್ವಯ ವಿನಿಯೋಗಿಸತಕ್ಕದ್ದು.

ii) ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ರಾಜ್ಯ ವಲಯದಡಿ ಬಿಳಿ ಬಣ್ಣದ ಸವಿವರ ಸಾದಿಲ್ವಾರು ಬಿಲ್ಲುಗಳ ಮೂಲಕ ಖಜಾನೆಯಲ್ಲಿ ಸೆಳೆಯತಕ್ಕದ್ದು.

iii) ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲು ರುಜು ಅಧಿಕಾರಿಗಳಾಗಿರುತ್ತಾರೆ.

iv) ಕೇಂದ್ರ ಕಛೇರಿಯಲ್ಲಿ ಸಾದಿಲ್ವಾರು ಬಿಲ್ಲುಗಳಿಗೆ ಆಯುಕ್ತರು, ಗ್ರಾ.ಕು.ನೀ.&.ನೈ. ಇಲಾಖೆ ಇವರು ಮೇಲು ರುಜು ಅಧಿಕಾರಿಗಳಾಗಿರುತ್ತಾರೆ.

v) ಆಯಾ ಬಟವಾಡೆ ಅಧಿಕಾರಿಗಳು ಖಜಾನೆಯ 62(ಬಿ) ಯೊಂದಿಗೆ ಲೆಕ್ಕ ಮರುಹೊಂದಾಣಿಕೆ ಮಾಡಿಕೊಂಡು ವೆಚ್ಚದ ವಿವರಗಳನ್ನು ಕೇಂದ್ರ ಕಛೇರಿಯ ಮುಖ್ಯ ಇಂಜಿನಿಯರ್‌ರವರಿಗೆ ಸಲ್ಲಿಸತಕ್ಕದ್ದು.

3. ಈ ಆದೇಶವನ್ನು ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂ.ಆಇ/3/ಟಿಎಫ್‌ಪಿ/2016, ಬೆಂಗಳೂರು, ದಿ: 02-04-2016 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾ.ನೀ.ಸ.) (ಪ್ರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

**ಪ್ರತಿಯನ್ನು :**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
9. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
10. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿಭವನ, ಬೆಂಗಳೂರು.
12. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು
13. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಖಜಾನೆ ಇಲಾಖೆ, ಬೆಂಗಳೂರು
14. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖಜಾನೆ ಇಲಾಖೆ, ಬೆಂಗಳೂರು
15. ಮುಖ್ಯ ಲೆಕ್ಕಾಧಿಕಾರಿಗಳು, RDW&SD ಕೇಂದ್ರ ಕಛೇರಿ, ಬೆಂಗಳೂರು.
16. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯದ ಎಲ್ಲಾ 30 ಜಿಲ್ಲೆಗಳು
17. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ರಾಜ್ಯದ ಎಲ್ಲಾ 30 ಜಿಲ್ಲೆಗಳು
18. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಜ್ಯದ ಎಲ್ಲಾ 30 ಜಿಲ್ಲೆಗಳು
19. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಜ್ಯದ ಎಲ್ಲಾ 30 ಜಿಲ್ಲೆಗಳು
20. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ, 4 ವೃತ್ತ ಕಛೇರಿಗಳು
21. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, ರಾಜ್ಯದ ಎಲ್ಲಾ 31 ವಿಭಾಗ ಕಛೇರಿಗಳು (31 ವಿಭಾಗ ಕಛೇರಿಗಳ ಮುಖಾಂತರ ರಾಜ್ಯದ ಎಲ್ಲಾ 176 ಉಪ ವಿಭಾಗ ಕಛೇರಿಗಳಿಗೆ)
22. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಗಳು.
23. ಆಯುಕ್ತರು, RDW&SD ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ ಇವರ ಆಪ್ತ ಸಹಾಯಕರಿಗೆ.
24. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಶಾಖೆ, ರಾಜಪೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
25. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರ ಆಪ್ತ ಸಹಾಯಕರು.
26. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
27. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
28. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
29. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
30. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

# ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/239/ಗ್ರಾಕುನೀ&ನೈಇ/2016, ಬೆಂಗಳೂರು, ದಿನಾಂಕ 14-06-2016 ರ ಲಗತ್ತು

## ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕೇಂದ್ರ ಕಛೇರಿ, ವೃತ್ತ ಕಛೇರಿ, ವಿಭಾಗ ಮತ್ತು ಉಪ ವಿಭಾಗಗಳಿಗೆ ವೇತನೇತರ ವೆಚ್ಚಕ್ಕಾಗಿ ಅನುದಾನ ಬಿಡುಗಡೆ

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆಗಳು | ಲೆಕ್ಕಶೀರ್ಷಿಕೆ 2215-01-001-1-03 | | | | | | | | ಒಟ್ಟಾರೆ |
|---|---|---|---|---|---|---|---|---|---|---|
| | | 021 - ವೈದ್ಯಕೀಯ ವೆಚ್ಚದ ಮರುಪಾವತಿ | 041 - ಪ್ರಯಾಣ ವೆಚ್ಚಗಳು | 051 - ಸಾಮಾನ್ಯ ವೆಚ್ಚಗಳು | 052 - ದೂರವಾಣಿ ವೆಚ್ಚಗಳು | 053 - ಪೀಠೋಪಕರಣಗಳ ಖರೀದಿ ವೆಚ್ಚಗಳು | 059 - ಇತರೆ ವೆಚ್ಚಗಳು | 071 - ಕಟ್ಟಡ ವೆಚ್ಚಗಳು | 195 - ಸಾರಿಗೆ ವೆಚ್ಚಗಳು | |
| 1 | ಬಾಗಲಕೋಟೆ | 0.50 | 1.27 | 2.93 | 0.90 | 1.45 | 2.42 | 1.51 | 2.33 | 13.31 |
| 2 | ಬೆಂಗಳೂರು(ಗ್ರಾ) | 0.50 | 0.59 | 2.50 | 0.92 | 1.49 | 2.48 | 1.55 | 2.38 | 12.41 |
| 3 | ಬೆಂಗಳೂರು(ನ) | 0.50 | 0.67 | 2.47 | 0.76 | 1.23 | 2.44 | 1.27 | 1.96 | 11.30 |
| 4 | ಬೆಳಗಾಂ | 0.50 | 1.85 | 7.13 | 2.72 | 3.03 | 5.49 | 3.43 | 5.05 | 29.20 |
| 5 | ಬಳ್ಳಾರಿ | 0.50 | 1.00 | 3.02 | 0.93 | 1.50 | 2.50 | 1.56 | 3.00 | 14.01 |
| 6 | ಬೀದರ್ | 0.50 | 1.22 | 3.70 | 1.14 | 1.84 | 2.86 | 1.91 | 2.44 | 15.61 |
| 7 | ಬಿಜಾಪುರ | 0.50 | 1.20 | 3.40 | 0.74 | 1.19 | 2.49 | 1.24 | 2.41 | 13.17 |
| 8 | ಚಾಮರಾಜನಗರ | 0.50 | 0.85 | 2.96 | 0.90 | 1.57 | 2.42 | 1.01 | 2.05 | 12.26 |
| 9 | ಚಿಕ್ಕಬಳ್ಳಾಪುರ | 0.50 | 0.73 | 2.71 | 1.14 | 1.84 | 2.57 | 1.91 | 2.05 | 13.45 |
| 10 | ಚಿಕ್ಕಮಗಳೂರು | 0.50 | 0.97 | 2.43 | 0.90 | 1.46 | 2.43 | 1.52 | 2.33 | 12.54 |
| 11 | ಚಿತ್ರದುರ್ಗ | 0.50 | 1.07 | 3.00 | 1.00 | 1.93 | 2.55 | 2.04 | 2.87 | 14.96 |
| 12 | ದಕ್ಷಿಣಕನ್ನಡ | 0.50 | 1.29 | 2.64 | 0.50 | 1.31 | 2.15 | 1.45 | 2.30 | 12.14 |
| 13 | ದಾವಣಗೆರೆ | 0.50 | 1.15 | 2.98 | 1.07 | 1.73 | 2.88 | 1.40 | 2.76 | 14.47 |
| 14 | ಧಾರವಾಡ | 0.50 | 1.13 | 2.41 | 0.59 | 1.25 | 2.18 | 1.49 | 2.02 | 11.57 |
| 15 | ಗದಗ | 0.50 | 1.09 | 2.59 | 0.80 | 1.89 | 2.18 | 1.13 | 1.92 | 12.10 |
| 16 | ಗುಲ್ಬರ್ಗಾ | 0.50 | 1.31 | 3.70 | 1.05 | 1.93 | 2.69 | 2.43 | 3.24 | 16.85 |
| 17 | ಹಾಸನ | 0.50 | 0.96 | 3.04 | 0.91 | 2.11 | 2.91 | 2.19 | 2.87 | 15.49 |
| 18 | ಹಾವೇರಿ | 0.50 | 0.83 | 3.25 | 1.00 | 1.61 | 2.19 | 1.68 | 2.58 | 13.64 |
| 19 | ಕೊಡಗು | 0.50 | 0.74 | 2.21 | 0.72 | 0.75 | 2.19 | 1.17 | 1.87 | 10.15 |
| 20 | ಕೋಲಾರ | 0.50 | 0.67 | 2.44 | 0.97 | 2.20 | 2.87 | 2.09 | 2.23 | 13.97 |
| 21 | ಕೊಪ್ಪಳ | 0.50 | 1.07 | 2.63 | 0.81 | 1.31 | 2.18 | 1.36 | 2.09 | 11.95 |
| 22 | ಮಂಡ್ಯ | 0.50 | 0.82 | 2.57 | 0.95 | 1.53 | 2.54 | 1.59 | 2.44 | 12.94 |
| 23 | ಮೈಸೂರು | 0.50 | 0.88 | 2.98 | 0.99 | 2.08 | 2.96 | 2.16 | 2.92 | 15.47 |
| 24 | ರಾಯಚೂರು | 0.50 | 1.31 | 2.63 | 1.00 | 1.90 | 2.99 | 2.40 | 3.12 | 15.85 |
| 25 | ರಾಮನಗರ | 0.50 | 0.53 | 2.52 | 0.87 | 1.40 | 2.33 | 1.45 | 2.24 | 11.84 |
| 26 | ಶಿವಮೊಗ್ಗ | 0.50 | 0.86 | 3.42 | 0.83 | 1.34 | 2.40 | 1.27 | 1.84 | 12.46 |
| 27 | ತುಮಕೂರು | 0.50 | 0.61 | 3.60 | 1.14 | 2.57 | 2.80 | 2.02 | 3.05 | 16.29 |
| 28 | ಉಡುಪಿ | 0.50 | 0.78 | 2.56 | 0.76 | 1.08 | 2.26 | 1.10 | 1.62 | 10.66 |
| 29 | ಉತ್ತರ ಕನ್ನಡ | 0.50 | 0.95 | 2.28 | 0.90 | 1.24 | 2.48 | 1.17 | 1.82 | 11.34 |
| 30 | ಯಾದಗಿರಿ | 0.50 | 0.96 | 2.90 | 0.89 | 1.24 | 2.57 | 1.50 | 2.30 | 12.86 |
| 31 | ಬೆಂಗಳೂರು ವೃತ್ತ | 0.30 | 1.16 | 2.60 | 0.55 | 0.25 | 1.40 | 0.50 | 1.00 | 7.76 |
| 32 | ಮೈಸೂರು ವೃತ್ತ | 0.30 | 1.16 | 2.60 | 0.55 | 0.25 | 1.40 | 0.50 | 1.00 | 7.76 |
| 33 | ಕಲಬುರ್ಗಿ ವೃತ್ತ | 0.30 | 1.16 | 2.60 | 0.55 | 0.25 | 1.40 | 0.50 | 1.00 | 7.76 |
| 34 | ಬೆಳಗಾಂ ವೃತ್ತ | 0.30 | 1.16 | 2.60 | 0.55 | 0.25 | 1.40 | 0.50 | 1.00 | 7.76 |
| 35 | ಕೇಂದ್ರ ಕಛೇರಿ | 3.80 | 0.00 | 0.00 | 0.00 | 0.00 | 0.00 | 0.00 | 1.90 | 5.70 |
| | ಒಟ್ಟು | **20.00** | **34.00** | **100.00** | **31.00** | **50.00** | **84.00** | **52.00** | **80.00** | **451.00** |

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀ.ಸ.) (ಪ್ರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.